■ ಹನಿ

## ಡೈವೋರ್ಸ್ ಬಾಬು



ಕನ್ನಡದ ಸಿನಿಮಾ ಪ್ರೇಕ್ಷಕರಿಗೆ ಸರತ್ ಬಾಬು (ಶರತ್ ಬಾಬು ಅಲ್ಲ!) ಹಳೇ ಪರಿಚಯ. 'ಅಮೃತ ವರ್ಷಿಣಿ' ಚಿತ್ರದಲ್ಲಿ ಸುಹಾಸಿನಿಯ ಗಂಡನ ಪಾತ್ರ ನಿರ್ವಹಿಸಿ ಎಲ್ಲರಿಂದ ಚಪ್ಪಾಳೆ ಗಿಟ್ಟಿಸಿದಾತ. ಬಹುತೇಕ ಸಿನಿಮಾಗಳಲ್ಲಿ ಸರತ್ ಬಾಬು ಅವರದ್ದು ಆದರ್ಶ ಗಂಡನ ಪಾತ್ರವೇ. ಆದರೆ ನಿಜಜೀವನದಲ್ಲಿ ಅದ್ಯಾಕೋ ಈ ಆದರ್ಶ ಪಾತ್ರ ಉಲ್ಟಾ ಹೊಡೆದಿದೆ. ಬಾಬು ಪತ್ನಿ ಸ್ನೇಹಲತಾ ದೀಕ್ಷಿತ್, ಕುಟುಂಬ ನ್ಯಾಯಾಲಯದಲ್ಲಿ ವಿಚ್ಛೇದನಕ್ಕೆ ಅರ್ಜಿ ಹಾಕಿದ್ದು, ಆಸ್ತಿಯಲ್ಲಿ ಪಾಲನ್ನೂ ಕೋರಿದ್ದಾರೆ. ಹಿರಿಯ ನಟ 3 ವರ್ಷಗಳ ಹಿಂದೆ ತೀರಿಕೊಂಡ ಎಂ.ಎನ್. ನಂಬಿಯಾರ್ ಮಗಳೀಕೆ. 'ನನ್ನ ಗಂಡ ಸಿಕ್ಕಾಪಟ್ಟೆ ಮಾನಸಿಕ ಹಿಂಸೆ ನೀಡುತ್ತಿದ್ದಾನೆ' ಎನ್ನುವುದು ಸ್ನೇಹಲತಾ ವಿಚ್ಛೇದನಕ್ಕೆ ಕೊಟ್ಟಿರುವ ಕಾರಣ!

ಹಾಗೆ ನೋಡಿದರೆ ಸರತ್ ಬಾಬೂಗೆ ಇದು ಎರಡನೆಯ ಡೈವೋರ್ಸ್! 20 ವರ್ಷಗಳ ಹಿಂದೆ ಮೊದಲ ಪತ್ನಿ ಚಿತ್ರನಟಿಯೂ ಆಗಿದ್ದ ರಮಾ ಪ್ರಭುಗೂ ಡೈವೋರ್ಸ್ ಕೊಟ್ಟಿದ್ದರು. ಅದು 1990. ರಮಾಗೆ ಡೈವೋರ್ಸ್ ಕೊಟ್ಟ ಸರತ್ ಬಾಬು, ಸ್ನೇಹಲತಾರನ್ನು ಆಕಸ್ಮಿಕವಾಗಿ ಭೇಟಿಯಾದರು. ಅದಾಗಲೇ ಸ್ನೇಹಲತಾರದ್ದು ಮೊದಲ ಮದುವೆ ಮುರಿದುಬಿದ್ದಿತ್ತು. ಇಬ್ಬರೂ ಪರಸ್ಪರ ಮೆಚ್ಚಿ ವಿವಾಹವಾದರು. ಈಗ 21 ವರ್ಷಗಳ ನಂತರ ಸಂಬಂಧ ಹಳಸಿ ವಿಚ್ಛೇದನ ಖಚಿತವಾಗಿದೆ. 'ಚೆನ್ನೈನಲ್ಲಿ ವಯಸ್ಸು 50 ದಾಟಿದವರು ಡೈವೋರ್ಸ್ ಪಡೆಯುತ್ತಿರುವುದು ಹೆಚ್ಚಾಗಿದೆ. ಡೈವೋರ್ಸ್ ಪಡೆಯುವ ತಲಾ ಐದರಲ್ಲಿ ಒಂದು ಜೋಡಿ ಇದೇ ವಯಸ್ಸಿನದ್ದು' ಎನ್ನುತ್ತಾರೆ ಅಲ್ಲಿನ ವಕೀಲರು.

ಸರತ್‌ಬಾಬು ನಿಜ ನಾಮಧೇಯ ಸತ್ಯನಾರಾಯಣ ದೀಕ್ಷಿತ್. ತಂದೆಯದ್ದು ಸ್ವಂತ ಹೋಟೆಲ್ ಇತ್ತು. ಮಗನೂ ಬಿಸಿನೆಸ್ ಮಾಡಲಿ ಎನ್ನುವುದು ಅವರ ಆಸೆ. ಕಾಲೇಜಿನಲ್ಲಿದ್ದಾಗ ಸರತ್ ಬಾಬುಗೆ ಪೊಲೀಸ್ ಅಧಿಕಾರಿ ಆಗುವ ಆಸೆಯಿತ್ತು. ಆದರೆ ದೃಷ್ಟಿದೋಷ ಇದ್ದುದರಿಂದ ಪೊಲೀಸ್ ಕೆಲಸದ ಕನಸು ದೂರವೇ ಉಳಿಯಿತು. 'ತುಂಬ ಸುಂದರವಾಗಿದ್ದೀಯ. ನೀನು ಸಿನಿಮಾ ಸ್ಟಾರ್ ಆಗಬಹುದು' ಎಂದು ಲೆಕ್ಚರರ್ಸ್ ಹೇಳಿದರು. ಅಮ್ಮ ಬೆಂಬಲಿಸಿದರು.

1978ರಲ್ಲಿ ಕೆ.ಬಾಲಚಂದರ್ ಸಿನಿಮಾ 'ನಿಳಲ್ ನಿಜಮಾಗಿರದು' ಚಿತ್ರದಲ್ಲಿ ಅವಕಾಶ ಸಿಕ್ಕಿತು. ಅದು ತೆಲುಗಿನಲ್ಲಿ ರಿಮೇಕ್ ಆಗಿ ಕಮಲಹಾಸನ್, ಚಿರಂಜೀವಿ ಜತೆ ಸರತ್ ಸರಿಸಮನಾಗಿ ನಟಿಸಿದರು. ಅಲ್ಲಿಂದೀಚೆಗೆ ಅವರು ಹಿಂದೆ ನೋಡಲಿಲ್ಲ. ಈವರೆಗೆ ದಕ್ಷಿಣದ ನಾಲ್ಕು ಭಾಷೆಗಳಲ್ಲಿ 250ಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿದ್ದಾರೆ. ಅದರಲ್ಲಿ 10-15 ಚಿತ್ರಗಳಲ್ಲಿ ವಿಲನ್ ಪಾತ್ರವನ್ನೂ ಮಾಡಿದ್ದಾರೆ.

ಸಿತಾರಾ ಎಂಬ ಚಿತ್ರದಲ್ಲಿ ಸರತ್ ಬಾಬು ವ್ಯಾಜ್ಯದಲ್ಲಿ ಸಿಕ್ಕಿಬಿದ್ದ, ಶ್ರೀಮಂತ ಜಮೀನ್ದಾರನ ಮಗನ ಪಾತ್ರ ಮಾಡಿದ್ದರು. ಆ ಪಾತ್ರದಲ್ಲಿ ಮದುವೆಯಾಗಲೂ ನಿರಾಕರಿಸಿ, ಆತ್ಮಹತ್ಯೆಯನ್ನೂ ಮಾಡಿಕೊಂಡಿದ್ದರು. ಈಗ ನೋಡಿದರೆ ಮಾಡಿಕೊಂಡ ಎರಡು ಮದುವೆಯೂ ಬರಖತ್ತಾಗಲಿಲ್ಲ!



## ಪೌಲ್ ಕನಸು

ಮೈಕ್ರೋಸಾಫ್ಟ್ ಸ್ಥಾಪಕ ಬಿಲ್ ಗೇಟ್ಸ್ ಎಲ್ಲರಿಗೂ ಗೊತ್ತು. ಆದರೆ ಆ ಕಂಪೆನಿಯ ಸಹ ಸ್ಥಾಪಕ ಪೌಲ್ ಜಿ ಆಲನ್ ಹೆಚ್ಚು ಜನರಿಗೆ ಗೊತ್ತಿಲ್ಲ. ಜಗತ್ತಿನಲ್ಲೇ ಬಹುದೊಡ್ಡ ಶ್ರೀಮಂತರಲ್ಲಿ ಒಬ್ಬರಾದ ಪೌಲ್ ಜಿ ಆಲನ್, ಇದೀಗ ಹೊಸದೊಂದು ದಾಖಲೆ ನಿರ್ಮಿಸ ಹೊರಟಿದ್ದಾರೆ. ಜಗತ್ತಿನ ಅತ್ಯಂತ ದೊಡ್ಡ ಆಕಾಶನೌಕೆಯೊಂದನ್ನು ನಿರ್ಮಿಸಲು ಕೈಹಾಕಿದ್ದಾರೆ. ಈ ಹೊಸ ಆಕಾಶನೌಕೆ ವಿಮಾನದಂತೆ ನೆಲದಿಂದ ಮೇಲಕ್ಕೆ ಹಾರಬಲ್ಲುದು. ಆಕಾಶದಲ್ಲಿ 30 ಸಾವಿರ ಅಡಿ ಎತ್ತರದಲ್ಲಿ ಆ ವಿಮಾನದಿಂದ ರಾಕೆಟ್ ಒಂದನ್ನು ಮೇಲಕ್ಕೆ ಉಡಾಯಿಸಬಹುದು. ಆ ರಾಕೆಟ್‌ನಲ್ಲಿ ಅಂತರಿಕ್ಷಕ್ಕೆ ತೇಲಿಬಿಡುವ ಉಪಗ್ರಹಗಳು, ವಿವಿಧ ಸಲಕರಣೆಗಳು ಮತ್ತು ಮನುಷ್ಯರೂ ಇರುತ್ತಾರೆ! ಈ ವಿಮಾನದ ರೆಕ್ಕೆಗಳೇ 385 ಅಡಿ ಉದ್ದ ಇರಲಿದೆಯಂತೆ. (ಅಂದರೆ ಒಂದು ಫುಟ್‌ಬಾಲ್ ಮೈದಾನದಷ್ಟು!) ಇನ್ನೇನು ನಾಲ್ಕು ವರ್ಷಗಳಲ್ಲಿ (2016) ಈ ರಾಕೆಟ್ ಉಡಾವಣೆಯ ಕನಸು ನಿಜವಾಗಲಿದೆ.

ಅಂತರಿಕ್ಷ ಹಾರಾಟದ ವಹಿವಾಟು ತುಂಬಾ ದುಬಾರಿಯದ್ದು. ಸರಕಾರಿ ಏಜೆನ್ಸಿಗಳು ಈಗ ಇಂತಹ ಖರ್ಚುಗಳನ್ನು ಕಡಿಮೆ ಮಾಡುತ್ತಿವೆ. ಉದಾಹರಣೆಗೆ ಅಮೆರಿಕದ ನಾಸಾ, ಈ ವರ್ಷ ತನ್ನ ಅಂತರಿಕ್ಷ ಯಾನದ ಯೋಜನೆಗಳನ್ನು ಮೊಟಕುಗೊಳಿಸಿ, ರಷ್ಯಾದ ಅಂತರರಾಷ್ಟ್ರೀಯ ಉಡ್ಡಯನ ಕೇಂದ್ರವನ್ನೇ ಬಾಡಿಗೆಗೆ ಬಳಸಲು ನಿರ್ಧರಿಸಿದೆ. ಇಂಥಾ ಹೊತ್ತಲ್ಲಿ ಪೌಲ್ ಆಲನ್, ಖಾಸಗಿ ಕ್ಷೇತ್ರದ ತೆಕ್ಕೆಗೆ ಅಂತರಿಕ್ಷ ಪ್ರಯಾಣವನ್ನು ತರಲು ಹೊರಟಿದ್ದಾರೆ.

ಜಗತ್ತಿನ ಅತ್ಯಂತ ದೊಡ್ಡ ಶ್ರೀಮಂತರ ಪೈಕಿ ಪೌಲ್ 57ನೇ ಸ್ಥಾನದಲ್ಲಿದ್ದಾರೆ. ಅವರ ಒಟ್ಟು ಆಸ್ತಿಯ ಮೊತ್ತ 1300 ಕೋಟಿ ಡಾಲರ್! ಬಿಲ್ ಗೇಟ್ಸ್‌ಗಿಂತ ಮೂರು ವರ್ಷ ದೊಡ್ಡವರಾದ ಪೌಲ್ (ಬರ್ತ್‌ಡೇ 21-1-1953), ಮೈಕ್ರೊಸಾಫ್ಟ್ ಎಂಬ ಹೆಸರನ್ನೂ ಕೊಟ್ಟಿದ್ದಲ್ಲದೆ, ವಿಶ್ವವಿದ್ಯಾಲಯವನ್ನು ಬಿಟ್ಟು ಕಂಪೆನಿ ಕಟ್ಟಲು ಬಿಲ್‌ಗೆ ಒತ್ತಡ ಹಾಕಿದವರೂ ಹೌದು. ಐಟಿ, ಮಾಧ್ಯಮ, ರಿಯಲ್ ಎಸ್ಟೇಟ್– ಹೀಗೆ ಪೌಲ್ ಕೈಹಾಕದ ಉದ್ಯಮವಿಲ್ಲ. ನೂರಾರು ಕಂಪೆನಿಗಳಲ್ಲಿ ಇವರ ಪಾಲು ಬಂಡವಾಳವಿದೆ. ಅದಕ್ಕಿಂತ ಹೆಚ್ಚಾಗಿ ಪೌಲ್ ಮಹಾದಾನಿ. ಅವರ ಫೌಂಡೇಷನ್ ಪ್ರತಿವರ್ಷ ಅಧಿಕೃತವಾಗಿಯೇ 300,00,000 ಡಾಲರ್ ಹಣವನ್ನು ದಾನ ಮಾಡುತ್ತಿದೆ– ಅದರ ದೊಡ್ಡ ಪಾಲು ಆರೋಗ್ಯ ಕ್ಷೇತ್ರಕ್ಕೆ ಹೋಗುತ್ತಿದೆ. 2007 ಮತ್ತು 08ರಲ್ಲಿ ಟೈಮ್ ಮ್ಯಾಗಸಿನ್‌ನ 'ಜಗತ್ತಿನ ಅತ್ಯಂತ ಪ್ರಭಾವಿ 100 ಮಂದಿ'ಯಲ್ಲಿ ಪೌಲ್ ಸ್ಥಾನ ಗಿಟ್ಟಿಸಿದ್ದರು.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65